# 1 ನೇ ಅಪರ ಜಿಲ್ಲಾ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

## ಎಸ್.ಸಿ –797/2023

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : | ನಾರಾಯಣ ಕೆ ಆರ್ | ಫ್ರಾಸಾ: | 1 |
| ತಂದೆ ಹೆಸರು | : | ಪಿ ರಾಜೇಗೌಡ | ಚಾಸಾ: | 1 |
| ವಯಸ್ಸು | : | 32 ವರ್ಷ | ಸಾಕ್ಷಿಯು ಪ್ರಮಾಣ ಮಾಡಿದ ದಿ:18.06.2025 | |
| ವೃತ್ತಿ | : | ವಲಯ ಅರಣ್ಯಾಧಿಕಾರಿ | | |
| ವಾಸ ಸ್ಥಳ | : | ಮಡಿಕೇರಿ | | |

**<u>ಮುಖ್ಯ ವಿಚಾರಣೆ: ಸರಕಾರಿ ಅಭಿಯೋಜಕರವರಿಂದ</u>**:

1. ನಾನು ಸೆಪ್ಟೆಂಬರ್ 2022 ರಿಂದ ಅಕ್ಟೊಬರ್ 2024 ರವರೆಗೆ ಹೆಡಿಯಾಲ ವಲಯದಲ್ಲಿ ವಲಯ ಅರಣ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ. ಚಾಸಾ–4 ಮತ್ತು 5 ರವರು ಅ ಕಾಲಕ್ಕೆ ಉಪ ವಲಯ ಅರಣ್ಯಾಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸುತಿದ್ದರು. ಚಾಸಾ–6 ಮತ್ತು 7 ರವರು ಅರಣ್ಯ ರಕ್ಷಕರಾಗಿ ಕರ್ತವ್ಯ ನಿರ್ವಹಿಸುತಿದ್ದರು.

2. ದಿಃ 13.01.2023 ರಂದು ಬೆಳಗ್ಗೆ 7.30 ಸಮಯದಲ್ಲಿ ಚಾಸಾ–4 ರವರು ನನಗೆ ಕರೆ ಮಾಡಿ ದೊಡ್ಡಬರಗಿ ಗ್ರಾಮದಲ್ಲಿ ಒಂದು ಕಾಡು ಹೆಣ್ಣಾನೆ ಅಕ್ರಮ ವಿದುತ್ ಸ್ಪರ್ಶದಿಂದ ಮೃತಪಟ್ಟಿರುತ್ತದೆ ಎಂಬುದಾಗಿ ಚಾಸಾ–6 ಮತ್ತು 7 ರವರು ತನಗೆ ತಿಳಿಸಿರುತ್ತಾರೆ ಎಂಬುದಾಗಿ ನನಗೆ ಮಾಹಿತಿ ನೀಡಿರುತ್ತಾರೆ. ನಂತರ ನಾನು ನಮ್ಮ ಮೇಲಾಧಿಕಾರಿಗಳಿಗೆ ಈ ವಿಚಾರವನ್ನು ತಿಳಿಸಿ ಅನಂತರ ನಾನು, ಚಾಸಾ–4 ಮತ್ತು ಚಾಸಾ–5 ರವರು ಅ ಜಾಗಕ್ಕೆ ಹೋಗಿ ನೋಡಲಾಗಿ, ಅದು ಸರ್ವೆ ನಂಬರ್ 36 ರ ಜಮೀನಾಗಿದ್ದು, ಅದು ಚಾಸಾ–16 ರವರಿಗೆ ಸೇರಿದ್ದುದಾಗಿರುತ್ತದೆ ಎಂಬುದಾಗಿ ತಿಳಿದು ಬಂದಿರುತ್ತದೆ. ಅ ಸ್ಥಳದಲ್ಲಿ ಒಂದು ಕಾಡು

ಹೆಣ್ಣಾನೆಯು ಅಕ್ರಮ ವಿದ್ಯುತ್ ಸ್ಪರ್ಶದಿಂದ ಮೃತ ಪಟ್ಟಿರುವುದು ಕಂಡು ಬಂದಿರುತ್ತದೆ. ಸದರಿ ಆನೆಯು ರಾತ್ರಿ ವೇಳೆಯಲ್ಲಿ ಆಹಾರವನ್ನು ಅರಸಿ ಅಲ್ಲಿಗೆ ಬಂದ ಕಾರಣ ಅ ಜಮೀನಿನಲ್ಲಿ ಅಕ್ರಮವಾಗಿ ವಿಧ್ಯುತ್ ಹರಿಬಿದ್ದಿದ್ದರಿಂದ ಅದಕ್ಕೆ ಸಿಲುಕಿ ಸಾವಿನಪ್ಪಿರಬಹುದೆಂದು ಕಂಡು ಬಂದಿರುತ್ತದೆ. ಅ ಜಮೀನನ್ನು 1 ನೇ ಆರೋಪಿಯು ಉಲುಮೆ ಮಾಡುತ್ತಿದ್ದ ಎಂದು ತಿಳಿದು ಬಂದಿರುತ್ತದೆ. ವಿಚಾರ ಮಾಡಲಾಗಿ 1 ನೇ ಆರೋಪಿಯು ಈ ಹಿಂದೆ 2018 ರಲ್ಲಿ ಜಮೀನಿಗೆ ಅಕ್ರಮ ವಿಧ್ಯುತ್ ಸಂಪರ್ಕ ಪಡೆದಿದ್ದರಿಂದ  ಒಂದು ಹೆಣ್ಣಾಣೆಯು ಅ ಅಕ್ರಮ ವಿಧ್ಯುತ್ ಸ್ಪರ್ಶಕ್ಕೆ ಸಿಲುಕಿ ಮೃತಪಟ್ಟಿದ್ದರಿಂದ ಅರಣ್ಯ ಮೊಕದ್ದಮೆ ದಾಖಲಾಗಿತ್ತು. ಅ ಪ್ರಕರಣವು ಹುಣಸೂರಿನ ಜಿಲ್ಲಾ ನ್ಯಾಯಾಲಯದಲ್ಲಿ Spl.C.C.No.139/2020 ರಲ್ಲಿ ವಿಚಾರಣೆ ನಡೆದಿರುತ್ತದೆ.

3. ಸರ್ವೆ ನಂಬರ್ 36 ರಲ್ಲಿ 2 ನೇ ಆರೋಪಿಯು ಗುತ್ತಿಗೆಗೆ ತೆಗೆದುಕೊಂಡು ರಾಗಿ ಬೆಳೆ ಹಾಕಿದ್ದನು ಎಂದು ತಿಳಿದುಬಂದಿರುತ್ತದೆ. ಹಾಗಾಗಿ ಸರ್ವೆ ನಂಬರ್ 36 ರ ಜಮೀನಿಗೆ ಆರೋಪಿತರಿಬ್ಬರು ಅಕ್ರಮ ವಿಧ್ಯುತ್ ಸಂಪರ್ಕ ಪಡೆದಿದ್ದರಿಂದ  ಅದರ ಸ್ಪರ್ಶದಿಂದ ಕಾಡು ಹೆಣ್ಣಾಣೆಯು ಮೃತ ಪಟ್ಟಿರುತ್ತದೆ. ಆದ್ದರಿಂದ ಆರೋಪಿತರು ವನ್ಯ ಜೀವಿ ಸಂರಕ್ಷಣೆ ಕಾಯಿದೆ ಮತ್ತು Indian Electricity Act ಉಲ್ಲಂಘನೆ ಮಾಡಿ, ಹೆಣ್ಣು ಕಾಡಾನೆ ಸಾವಿಗೆ ಕಾರಣನಾಗಿರುತ್ತಾರೆ. ಈ ಬಗ್ಗೆ ನಾನು ಸರಗೂರು ಪೊಲೀಸ್ ಠಾಣೆಗೆ ಲಿಖಿತ ದೂರನ್ನು ಕೊಟ್ಟಿರುತ್ತೇನೆ. ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು, ಲಿಖಿತ ದೂರನ್ನು **ನಿಪಿ.1** ಎಂದು, ಸಾಕ್ಷಿಯ ಸಹಿಯನ್ನು **ನಿಪಿ.1(ಎ)** ಎಂದು ಗುರುತಿಸಲಾಯಿತು.

4. ಅದೇ ದಿನ ಮದ್ಯಾಹ್ನ 2.30 ರಿಂದ 4 ಗಂಟೆಯವರೆಗೆ ನಾನು ಸ್ಥಳವನ್ನು ತೋರಿಸಿದ ಮೇರೆಗೆ ಸರಗೂರು ಪೊಲೀಸ್ ಠಾಣೆಯ ASI ರವರು ಸ್ಥಳದಲ್ಲಿ ಚಾಸಾ-2

ಮತ್ತು ಚಾಸಾ–3 ರವರ ಸಮಕ್ಷಮ ಪಂಚನಾಮೆಯನ್ನು ಮಾಡಿರುತ್ತಾರೆ. ಅ ಸಮಯದಲ್ಲಿ, ನಾನು, ಚಾಸಾ–4, ಚಾಸಾ–5 ರವರು ಇದ್ದೆವು. ಪಂಚನಾಮೆಗೆ ನಾವು ಮತ್ತು ಪಂಚರು ಸಹಿ ಮಾಡಿದ್ದೇವೆ. ಸ್ಥಳದಲ್ಲಿ ಆರೋಪಿತರು ಅಕ್ರಮವಾಗಿ ವಿದ್ಯುತ್ ಸಂಪರ್ಕ ಪಡೆದ 60 ಮೀಟರ್ ಉದ್ದದ ಅಲ್ಯೂಮಿನಿಯಂ ವೈರ್ ಮತ್ತು 3 ಮರದ ದೊಣ್ಣೆಗಳನ್ನು ವಶಪಡಿಸಿಕೊಂಡಿರುತ್ತಾರೆ. ಅದಕ್ಕೆ ನನ್ನ ಹಾಗೂ ಸಾಕ್ಷಿಗಳ ಸಹಿಯನ್ನು ಪಡೆದು ಅಂಟಿಸಿರುತ್ತಾರೆ. ಮಹಜರ್ ನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು **ನಿಪಿ.2** ಎಂದು, ಸಾಕ್ಷಿಯ ಸಹಿಯನ್ನು **ನಿಪಿ.2(ಎ)** ಎಂದು ಗುರುತಿಸಲಾಯಿತು.

5. ಈ ಹಂತದಲ್ಲಿ ಪಿಪಿ ಯವರ ವಿನಂತಿ ಮೇರೆಗೆ ಪಿಎಫ್ ಸಂಖ್ಯೆ 7/2023 ರಲ್ಲಿ ನಮೂದಿಸಿರುವ ಸೀಲಾದ ವಸ್ತು ಸಂಖ್ಯೆ 1 ಮತ್ತು 2 ನ್ನು ತೆರೆದ ನ್ಯಾಯಾಲಯದಲ್ಲಿ ಒಡೆದು ಸಾಕ್ಷಿಗೆ ತೋರಿಸಿ ಅವರು ಗುರುತಿಸಿದ ಮೇರೆಗೆ ಐಟಂ ನಂ. 1 ನ್ನು **ಮು.ಮಾ–1** ಎಂದು, ಐಟಂ ನಂ.2 ನ್ನು **ಮು.ಮಾ–2** ಎಂದು ಗುರುತಿಸಲಾಯಿತು.

6. ಸ್ಥಳದಲ್ಲಿ ಮೃತ ಪಟ್ಟ ಹೆಣ್ಣು ಕಾಡಾನೆಯ ಪಿ.ಎಮ್ ಮಾಡುವ ಸಲುವಾಗಿ ಇಲಾಖಾ ವೈದ್ಯರು ಸ್ಯಾಂಪಲ್ ತೆಗೆದುಕೊಂಡಿರುತ್ತಾರೆ. ನಂತರ ಸ್ಥಳದಲ್ಲಿ ಗುಂಡಿ ತೆಗೆದು ಸದರಿ ಆನೆಯನ್ನು ಊತು ಹಾಕಿರುತ್ತೇವೆ. ಅ ಸಮಯದಲ್ಲಿ ತೆಗೆದ 6 ಪೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ **ನಿಪಿ.3 ರಿಂದ 8** ಎಂದು ಗುರುತಿಸಲಾಯಿತು. CD ಯನ್ನು **ನಿಪಿ.9** ಎಂದು ಗುರುತಿಸಲಾಯಿತು.

7. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಅರೋಪಿತರಿಬ್ಬರು ಶಾಮೀಲಾಗಿ ಅ ಕೃತ್ಯವನ್ನು ಎಸಗಿರುತ್ತಾರೆ.

<u>ಪಾಟೀ ಸವಾಲು ಃ</u> ಆರೋಪಿ ಪರ ವಕೀಲರು ಸಮಯ ಕೇಳಿದ್ದರಿಂದ ಮುಂದೂಡಲಾಯಿತು

*(ನನ್ನ ಉ ಮೇ ತೆ ನ್ಯಾ ಬೆ ಮಾಡಲಾಯಿತು)*

ಓ ಹೇ ಕೇ ಸ ಇ ಎ

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು